ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ದಯಮಾಡಿ ನಿಯಮಾವಳಿ ಪ್ರಕಾರ ನಮಗೆ ಮೊದಲು ಅವಕಾಶ ಕೊಡಬೇಕು. ನಾವು ಅವರಿಗಿಂತ ಮೊದಲು ನೋಟಿಸ್ ಕೊಟ್ಟಿದ್ದೇವೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ ಎಂದು ಯಾವಾಗಲಾದರೂ ನೋಟಿಸ್ ಕೊಡುವ ಪ್ರಶ್ನೆ ಅಲ್ಲ. ನಿಯಮಾವಳಿ ಪ್ರಕಾರ ನಮಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಮೊದಲು ವಿರೋಧಪಕ್ಷದ ನಾಯಕರು submission ಮಾಡಿದ ಮೇಲೆ ತಾವು ಮಾಡಿ. ಪ್ರಶ್ನೋತ್ತರ ಆದ ನಂತರ ತಕ್ಷಣ 69 ಗೆ convert ಮಾಡಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಬೆಳಗ್ಗೆ 10.00 ಗಂಟೆಗೆ ನಿಯಮ 60 ರಡಿಯಲ್ಲಿ ಚರ್ಚೆ ನಡೆಸಬೇಕೆಂದು ನೋಟಿಸ್ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು:– ನಾನು ಚರ್ಚೆಗೆ ಒಪ್ಪಿಕೊಂಡಿದ್ದೇನಲ್ಲಾ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಇದು ಅತ್ಯಂತ ಗಂಭೀರವಾದಂತಹ ವಿಷಯ. ಅವರು ಚರ್ಚೆ ಮಾಡಲು ನೋಟಿಸ್ ಕೊಟ್ಟಿಲ್ಲ. ಅವರಿಗೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದರೆ ಏನರ್ಥ?

(ಗೊಂದಲ)

ಅಧ್ಯಕ್ಷರು:– ಅವರು ನೋಟಿಸ್ ಕೊಟ್ಟಿದ್ದಾರೆ.